ಓ ಎಸ್ ನಂ. 406/2014

ಪಿ ಡಬ್ಲ್ಯೂ: 1

ದಿ. 14-9-2018 ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಆರ್ ಎಂ ಓ ವಕೀಲರಿಂದಃ

ನಾನು ಕೆಂಕೆರೆ ಗ್ರಾಮದ ಭೈರಪ್ಪ ತಂದೆ ಮುರಿಗೆಪ್ಪ ಮತ್ತು ಆತನ ಹೆಂಡತಿ ಗೌರಮ್ಮನ ಬಗ್ಗೆ ಈ ದಾವೆ ಹೂಡುವ ಮೊದಲು ತಿಳಿದುಕೊಂಡಿರುತ್ತೇನೆ. ಸದರಿ ಭೈರಪ್ಪನಿಗೆ 8 ಜನ ಮಕ್ಕಳು ಎಂದರೆ ಸರಿ. ಮೊದಲನೇಯವರು ಸಿದ್ದಗಂಗಮ್ಮ, 2 ನೇಯವರು ತಿಪ್ಪೇಸ್ವಾಮಿ , 3 ನೇ ಯವರು ದ್ಯಾಮಪ್ಪ ಲ, 4 ನೇಯವರು ಶಿವಗಂಗಮ್ಮ , 5 ನೇಯವರು ರತ್ನಮ್ಮ , 6 ನೆಯವರು ವನಜಾಕ್ಷಮ್ಮ , 7 ನೇಯವರು ಶಾಂತಮ್ಮ ಮತ್ತು 8 ನೇಯವರು ಆಂಜಿನಮ್ಮ ಎಂದರೆ ಸರಿ. 2 ನೇಯವರಾದ ತಿಪ್ಪೇಸ್ವಾಮಿಯವರು 1954 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ತಿಪ್ಪೇಸ್ವಾಮಿಯ ಹೆಂಡತಿ ಮತ್ತು ಮಕ್ಕಳನ್ನು 1 ರಿಂದ 3 ನೇ ಪ್ರತಿವಾದಿಯರಾಗಿ ಸೇರಿಸಿರುತ್ತೇನೆ ಎಂದರೆ ಸರಿ. ಭೈರಪ್ಪನ ಹೆಂಡತಿ ಗೌರಮ್ಮ ಸು.12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭೈರಪ್ಪ 1993 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಭೈರಪ್ಪನಿಗೆ ಪಿತ್ರಾರ್ಜಿತವಾಗಿ ಸು.30 ಎಕರೆ ಬಂದಿತ್ತು ಎಂದರೆ ಸರಿ. ಸದರಿ 30 ಎಕರೆ ಜಮೀನಿನಲ್ಲಿ ಭೈರಪ್ಪನವರು 12 ಎಕರೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಉಳಿದ 15 ಎಕರೆ ಜಮೀನನ್ನು ತಿಪ್ಪೇಸ್ವಾವಿು ಮತ್ತು 4 ನೇಪ್ರತಿವಾದಿ ತಲಾ ಅರ್ಧ ಅನುಭವಿಸುತ್ತಿದ್ದಾರೆ ಎಂದರೆ ಸರಿ.

ಭೈರಪ್ಪರವರಿಗೆ ಸ್ವಯಾರ್ಜಿತವಾದ 12 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಭೈರಪ್ಪರವರ ಮೊದಲನೇ ಮಗಳಾದ ಸಿದ್ದಗಂಗಮ್ಮರವರನ್ನು ನಾಕಿಕೆರೆ ಗ್ರಾಮದ ರುದ್ರಪ್ಪ ಎಂಬುವರಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಸದರಿಯವರಿಗೆ ಮದುವೆ ಕಾಲದಲ್ಲಿ ಸಾಕಷ್ಟು ಹಣ ಮತ್ತು ಬಂಗಾರವನ್ನು ನೀಡಲಾಗಿತ್ತು ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ಮದುವೆಯಾದ ಕೆಲವೇ ದಿನಗಳಲ್ಲಿ ತನ್ನ ಗಂಡ ರುದ್ರಪ್ಪನನ್ನು ತೊರೆದು ಕೋಡಿಹಳ್ಳಿ ಗ್ರಾಮದ ರಂಗಪ್ಪ ಎಂಬುವರೊಂದಿಗೆ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಕಾರಣದಿಂದ ಭೈರಪ್ಪರವರು ಸಿದ್ದಗಂಗಮ್ಮರವರೊಂದಿಗೆ ಸಂಬಂಧವನ್ನು ಕಡಿದುಕೊಂಡಿದ್ದರು ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ಭೈರಪ್ಪ ಮತ್ತು ಗೌರಮ್ಮರವರು ಮೃತಪಟ್ಟಾಗ ಅಂತ್ಯಕ್ರಿಯೆಗೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಸಿದ್ದಗಂಗಮ್ಮರವರನ್ನು ಮದುವೆಯಾಗಿದ್ದ ರುದ್ರಪ್ಪರವರು ಸು.15-16 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಭೈರಪ್ಪರವರು ಮೃತಪಟ್ಟಾಗ 9 ನೇ ಪ್ರತಿವಾದಿಯನ್ನುಹೊರತು ಪಡಿಸಿ ಮಿಕ್ಕ ಎಲ್ಲಾ ಮಕ್ಕಳ ಮದುವೆ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಮಕ್ಕಳ ಮದುವೆ ಮಾಡಿದ್ದರು ಎಂದು ನುಡಿಯುತ್ತಾರೆ.

ಭೈರಪ್ಪನವರು ಸಿದ್ದಗಂಗಮ್ಮರವರನ್ನು ಹೊರತುಪಡಿಸಿ ಮಿಕ್ಕ ಹೆಣ್ಣು ಮಕ್ಕಳಿಗೆ ಅರಿಶಿಣ ಕುಂಕುಮಕ್ಕಾಗಿ ಜಮೀನನ್ನು ಕೊಡಬೇಕು ಎಂಬಉದ್ದೇಶ ಹೊಂದಿದ್ದರು ಎಂದರೆಸ ರಿ.ಸಾಕ್ಷಿ ಮುಂದುವರೆದು ಎಲ್ಲರಿಗೂ ಕೊಡುವ ಉದ್ದೇಶ ಹೊಂದಿದ್ದರು ಎಂದು ನುಡಿಯುತ್ತಾರೆ. ದಿ.23-1-1992 ರಂದು ಭೈರಪ್ಪನವರು ಅವರ ಮಗ ತಿಪ್ಪೇಸ್ವಾವಿುಯೊಂದಿಗೆ ಸೇರಿಕೊಂಡು ನೋಂದಾಯಿತವಲ್ಲದ ದಾನದ ಒಪ್ಪಿಗೆ ಕರಾರು ಪತ್ರಗಳ ಮೂಲಕ ಸಿದ್ದಗಂಗಮ್ಮನನ್ನುಹೊರತುಪಡಿಸಿ ಮಿಕ್ಕ 5 ಜನ ಹೆಣ್ಣು ಮಕ್ಕಳು ಅಂದರೆ 5 ರಿಂದ 9 ನೇ ಪ್ರತಿವಾದಿಯರಿಗೆ ಜಮೀನುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೋಸದಿಂದ ಬರೆದುಕೊಟ್ಟಿರುತ್ತಾರೆ ಎಂದರೆ ನುಡಿಯುತ್ತಾರೆ. ಆ ಪ್ರಕಾರ 5 ರಿಂದ 9 ನೇ ಪ್ರತಿವಾದಿಯರು ತಲಾ 2 ಎಕರೆ ಜಮೀನುಗಳನ್ನು ಅಂದಿನಿಂದ ಸ್ವಾಧೀನತೆ ಹೊಂದಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾನದ ಒಪ್ಪಿಗೆ ಕರಾರುಪತ್ರ ಆದ ಕೆಲವೇ ದಿನಗಳಲ್ಲಿ

ಭೈರಪ್ಪನವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಿಪ್ಪೇಸ್ವಾಮಿರವರು 1995 ರಲ್ಲಿ ಮೃತಪಟ್ಟಿದ್ದರಿಂದ ಸದರಿ ದಾನಪತ್ರ ಗಳನ್ನುನೋಂದಣಿ ಮಾಡಿಸಲು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತುಗಳ ವೇಲೆ ಕಂದಾಯ ಕಟ್ಟದಿದ್ದಕಾರಣ ಸದರಿ ಸ್ವತ್ತುಗಳು ಸರ್ಕಾರಕ್ಕೆ ಕಂದಾಯ ಸಂದಾಯ ಆಗುವವರೆಗೂ ಪಡಾ ಎಂದು ಸೇರಿಸಲಾಗಿತ್ತು ಎಂದರೆ ಸರಿಯಲ್ಲ. 5 ರಿಂದ 9 ನೇ ಪ್ರತಿವಾದಿಯರು ಕಂದಾಯವನ್ನು ಸಂದಾಯ ಮಾಡಿ ಸದರಿ ಜಮೀನುಗಳನ್ನು ಮೂಲ ಖಾತೆದಾರ ಭೈರಪ್ಪನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. 5 ರಿಂದ 9 ನೇ ಪ್ರತಿವಾದಿಯರು ಸದರಿ 12 ಎಕರೆ 13 ಗುಂಟೆ ಜಮೀನಿನಲ್ಲಿ ಕಂದಾಯ ಪಾವತಿಸಿದ ನಂತರ ತಲಾ 2 ಎಕರೆ ಜಮೀನಿನ ಸ್ವಾಧೀನತೆ ಹೊಂದಿ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸೃಷ್ಠಿಮಾಡಿಕೊಂಡು ಆರೀತಿ ಅನುಭವಿಸುತ್ತಿದ್ದಾರೆ ಎಂದು ನುಡಿಯುತ್ತಾರೆ. 5 ರಿಂದ 9 ನೇ ಪ್ರತಿವಾದಿಯರು ಸದರಿ ಜಮೀನುಗಳ ಖಾತೆಗಳನ್ನು 1998 ರಲ್ಲಿಯೇ ತಲಾ 2 ಎಕರೆ ಜಮೀನಿನಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಉಳಿದ 2 ಎಕರೆ 13 ಗುಂಟೆ ಜಮೀನನ್ನು ಭೈರಪ್ಪನವರ ಹೆಸರಿನಲ್ಲಿಯೇ ಬಿಟ್ಟಿದ್ದರು ಎಂದರೆ ಸರಿ.ಸಾಕ್ಷಿಮುಂದುವರೆದು ಸೃಷ್ಠಿಮಾಡಿಕೊಂಡು 9 ನೇ ಪ್ರತಿವಾದಿಯ ಹೆಸರಿಗೆ ಮಾಡಿಸಲು ಆ ರೀತಿ ಬಿಟ್ಟಿದ್ದರು ಎಂದು ನುಡಿಯುತ್ತಾರೆ. ಉಳಿದ 2 ಎಕರೆ 13 ಗುಂಟೆ ಜಮೀನನ್ನು 9 ನೇ ಪ್ರತಿವಾದಿಯ ಮದುವೆ ಆಗದಿದ್ದಕಾರಣ ಮದುವೆ ಖರ್ಚಿಗಾಗಿ ದಿ.23-1-1998 ರಂದು 5 ರಿಂದ 8 ನೇ ಪ್ರತಿವಾದಿಯರು ಮತ್ತು ಸಿದ್ದಗಂಗಮ್ಮ ಒಪ್ಪಿಗೆ ಕರಾರುತ್ರಪ್ರವನ್ನು ಬರೆದು ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ 9 ನೇ ಪ್ರತಿವಾದಿ ಸದರಿ ಜಮೀನಿನ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

9 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆದ ನಂತರ ಆಕೆ ಸಿದ್ದಲಿಂಗಪ್ಪ ಎಂಬುವರನ್ನು ಮದುವೆ ಆಗಿರುತ್ತಾಳೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಭೈರಪ್ಪ ಮತ್ತು ತಿಪ್ಪೇಸ್ವಾಮಿ ನೀಡಿದ 2 ಎಕರೆ ಜಮೀನನ್ನು ಮತ್ತು 5 ರಿಂದ 8 ನೇ ಪ್ರತಿವಾದಿಯರು ಹಾಗೂ ಸಿದ್ದಲಿಂಗಮ್ಮ ಬರೆದುಕೊಟ್ಟ 2 ಎಕರೆ 13 ಗುಂಟೆ ಜಮೀನನ್ನು ಒಟ್ಟಾಗಿ 4 ಎಕರೆ 13 ಗುಂಟೆ ಜಮೀನನ್ನು ಮಾಲೀಕಳಾಗಿ ಖಾತೆ ಮಾಡಿಸಿಕೊಂಡು ಅನುಭವಿಸುತ್ತಾ ಬಂದಿರುತ್ತಾಳೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ 3 ಕೊಳವೆ ಬಾವಿಗಳನ್ನು ಕೊರೆಸಿ ಅಡಿಕೆ ಮತ್ತು ತೆಂಗಿನ ತೋಟವನ್ನು ಮಾಡಿರುತ್ತಾರೆ ಎಂದರೆ ಸರಿ. ಸದರಿ ತೋಟದ ಅಭಿವೃದ್ದಿಗಾಗಿ ಜಮಿನನ್ನು ಮಾಡದಕೆರೆ ಪ್ರಗತಿ ಗ್ರಾಮೀಣ ಬ್ಯಾಂಕಿಗೆ ಅಡಮಾನ ಇಟ್ಟು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಕೊಳವೆ ಬಾವಿ ಕೊರೆಸಲು ಬೇರೆಯವರ ಬಳಿ ಸು.5 ಲಕ್ಷ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 9 ನೇ ಪ್ರತಿವಾದಿ ಸದರಿ ತೋಟದಲ್ಲಿ ಇತ್ತೀಚೆಗೆ ದಾಳಿಂಬೆ ಬೆಳೆಯನ್ನು ಕೂಡ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ.

9 ನೇ ಪ್ರತಿವಾದಿ ಅನುಭವಿಸುತ್ತಿರುವ ಜಮೀನಿನ ಪೂರ್ವ ದಿಕ್ಕಿಗೆ ರಸ್ತೆ ಮತ್ತು ಬೂದಿಪುರದ ನಿಂಗಪ್ಪನ ಜಮೀನು ಬರುತ್ತದೆ ಎಂದರೆ ಸರಿ. ಪಶ್ಚಿಮ ದಿಕ್ಕಿಗೆ ಉಳಿದ ಜಮೀನು ಮತ್ತು ಗಂಗಿ ಹಳ್ಳ ಬರುತ್ತದೆ ಎಂದರೆ ಸರಿ. ಉತ್ತರಕ್ಕೆ 8 ನೇ ಪ್ರತಿವಾದಿಯ 2 ಎಕರೆ ಜಮೀನು ಮತ್ತು ದಕ್ಷಿಣಕ್ಕೆ 6 ನೇಪ್ರತಿವಾದಿಯ 6 ಎಕರೆ ಜಮೀನುಇರುತ್ತದೆ ಎಂದರೆ ಸರಿ. 6 ನೇ ಪ್ರತಿವಾದಿಗೆ 9 ನೇಪ್ರತಿವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಇರುವ ಜಮೀನುದಾನದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ 6 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಬೂದಿಪುರದ ನಿಂಗಪ್ಪನ ಜಮೀನು, ಪಶ್ಚಿಮಕ್ಕೆಗಂಗಿ ಹಳ್ಳ ಉತ್ತರಕ್ಕೆ 9 ನೇ ಪ್ರತಿವಾದಿ ಜಮೀನು ಮತ್ತು ದಕ್ಷಿಣಕ್ಕೆ ದೊಡ್ಡಘಟ್ಟದ ರುದ್ರಪ್ಪನ ಜಮೀನು ಈ ರೀತಿ ಚಕ್ಕುಬಂದಿಇರುತ್ತದೆ ಎಂದರೆ ಸರಿ. 7 ನೇ ಪ್ರತಿವಾದಿಯ 2 ಎಕರೆ ಜಮೀನಿಗೆ ಪೂರ್ವ ಮತ್ತು ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ 5 ನೇ ಪ್ರತಿವಾದಿಯ ಜಮೀನು ಮತ್ತು ದಕ್ಷಿಣಕ್ಕೆ 8 ನೇ ಪ್ರತಿವಾದಿಯ ಜಮೀನು ಈ ರೀತಿ ಚಕ್ಕುಬಂದಿ ಇರುತ್ತದೆ

ಎಂದರೆ ಸರಿ. 7 ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ತೋಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೊಳವೆ ಬಾವಿ ಕೊರೆಸಿರುತ್ತಾರೆ ಎಂದು ನುಡಿಯುತ್ತಾರೆ.

6 ನೇ ಪ್ರತಿವಾದಿ ತಮ್ಮ ಜಮೀನನ್ನು ಅನುಭವಿಸಿಕೊಂಡು ಬಂದು ಇತ್ತೀಚೆಗೆ ಉಳುಮೆ ಮಾಡದೇ ಬೀಳು ಬಿಟ್ಟಿರುತ್ತಾರೆ ಎಂದರೆ ಸರಿ. 5 ಮತ್ತು 8 ನೇ ಪ್ರತಿವಾದಿಯರು ತಲಾ 2 ಎಕರೆ ಜಮೀನುಗಳನ್ನು ಖಾತೆ ಮಾಡಿಸಿಕೊಂಡು ಇಂದಿಗೂ ಅನುಭವಿಸುತ್ತಿದ್ದಾರೆ ಎಂದರೆ ಸರಿ. ಸಿದ್ದಗಂಗಮ್ಮರವರು ಕೋಡಿಹಳ್ಳಿಯರಂಗಪ್ಪನೊಂದಿಗೆ ವಾಸ ಮಾಡಲು ಪ್ರಾಂಭಿಸಿದಾಗಿನಿಂದ ಭೈರಪ್ಪ ಮೃತಹೊಂದುವ ತನಕ ತವರು ಮನೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1998 ರಲ್ಲಿ ಸಿದ್ದಗಂಗಮ್ಮರವರು ದೊಡ್ಡಕಿಟ್ಟದಹಳ್ಳಿ ಗ್ರಾಮ ಲೆಕ್ಕಾಧಿಕಾರಿಗಳ ಮುಂದೆ ಹಾಜರಾಗಿ 2 ಎಕರೆ 13 ಗುಂಟೆ ಜಮೀನನ್ನು 9 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಲು ತಕರಾರು ಇರುವುದಿಲ್ಲ ಎಂದು ಹೇಳಿಕೆನೀಡಿದ್ದರು ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ಇಂದಿಗೂ ಸಹ ಕೋಡಿಹಳ್ಳಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸಿದ್ದಗಂಗಮ್ಮ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಿದ್ದಗಂಗಮ್ಮರವರು ಜೀವಂತ ಇರುತ್ತಾರೋ ಅಥವಾ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುತ್ತೇನೆ. ಸಂಬಂಧಪಟ್ಟ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇವೆ. ಸಾಕ್ಷಿ ಮುಂದುವರೆದು ಸಿದ್ದಗಂಗಮ್ಮರ ಭಾವಚಿತ್ರ ಇರದ ಕಾರಣ ದೂರು ಸ್ವೀಕಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಿದ್ದಗಂಗಮ್ಮರವರು ಕಾಣೆಯಾದ ಬಗ್ಗೆ ಪತ್ರಿಕೆ ಪ್ರಕಟಣೆ ಹೊರಡಿಸಿಲ್ಲ. ಸದರಿ ಸಿದ್ದಗಂಗಮ್ಮ ಕಾಣೆಯಾಗಿ ಸು.25 ವರ್ಷ ಆಗಿರಬಹುದು. ಸದರಿ ಸಿದ್ದಗಂಗಮ್ಮ ಅಷ್ಟು ವರ್ಷಗಳ ಕಾಲ ಕಾಣೆಯಾಗಿದ್ದರ ಬಗ್ಗೆ ನ್ಯಾಯಾಲಯದಲ್ಲಿ ಅರ್ಜಿಯನ್ನು ಅಥವಾ ದಾವೆಯನ್ನು ಸಲ್ಲಿಸಿ ಸೂಕ್ತ ಪರಿಹಾರವನ್ನು ಪಡೆದಿಲ್ಲ. ಈದಾವೆ ಹೂಡುವ ಕಾಲಕ್ಕೆ ಸಿದ್ದಗಂಗಮ್ಮರವರನ್ನು ಪಕ್ಷಕಾರರನ್ನಾಗಿ ಸೇರಿಸಿಲ್ಲ. ಸಾಕ್ಷಿ ಮುಂದುವರೆದು ಅವರು ಇಲ್ಲದ ಕಾರಣ ಅವರನ್ನು ಪಕ್ಷಕಾರರನ್ನಾಗಿ ಸೇರಿಸಿಲ್ಲ ಎಂದು ನುಡಿಯುತ್ತಾರೆ.

ನಾನು ಇದೇನ್ಯಾಯಾಲಯದ ಮುಂದೆ ಓ ಎಸ್ 230/2013 ರಲ್ಲಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೆ ನಂ.107/1 ರಲ್ಲಿ 2 ಎಕರೆ ಜಮೀನಿಗೆ ಸಂಬಂಧಿಸಿ ಘೋಷಣೆ ಪರಿಹಾರ ಕೋರಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ 5 ಮತ್ತು 7 ರಿಂದ 9 ನೇ ಪ್ರತಿವಾದಿಯರು ಹಾಜರಾಗಿ ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಫಲಳಾಗುವುದಿಲ್ಲ ಎಂದು ಗೊತ್ತಾಗಿದ್ದರಿಂದ ಅದನ್ನು ಹಿಂಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ತಾಯಿಯ ಭಾಗವನ್ನು ನಮಗೆ ಕೊಡಿಸಲು ಹೂಡಿರುತ್ತೇವೆ. ಈ ದಾವೆಯಲ್ಲಿ ಭೈರಪ್ಪನಿಗೆ ಸಂಬಂಧಪಟ್ಟ ಪಿತ್ರಾರ್ಜಿತ ಸ್ವತ್ತುಗಳನ್ನು ಸೇರಿಸಿಲ್ಲ. ಈ ದಾವೆಯಲ್ಲಿ ಭೈರಪ್ಪನಿಗೆ ಸಂಬಂಧಿಸಿದ ಪಿತ್ರಾರ್ಜಿತ ಸ್ವತ್ತನ್ನು ಸೇರಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ಮತ್ತು 2 ನೇ ವಾದಿ ಸಿದ್ದಗಂಗಮ್ಮನ ಮಕ್ಕಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿರುತ್ತೇನೆ. ನಾನು ಮತ್ತು 2 ನೇ ವಾದಿ ಸಿದ್ದಗಂಗಮ್ಮನ ಮಕ್ಕಳಲ್ಲ ಮತ್ತು ನಮಗೂ ಭೈರಪ್ಪನ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು 1 ರಿಂದ 4 ನೇ ಪ್ರತಿವಾದಿಯರೊಂದಿಗೆ ಷರೀಕಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು 2 ನೇ ವಾದಿಗೂ ದಾವಾಸ್ವತ್ತಿನಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರ ಮಾತುಕೇಳಿ ದಾವಾಸ್ವತ್ತುಗಳಲ್ಲಿ ಅಕ್ರಮವಾಗಿ ಲಾಭ ಪಡೆಯಲು ಸುಳ್ಳು ಸಂಗತಿಗಳನ್ನು ಹೇಳಿ ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿದ್ದಗಂಗಮ್ಮರವರು ದೊಡ್ಡಕಿಟ್ಟದಹಳ್ಳಿಯಲ್ಲಿ ವಾಸ ಇದ್ದರೂ ಸಹ ಸದರಿಯವರು 25 ವರ್ಷಗಳಿಂದ ಕಾಣೆಯಾಗಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4 ಮತ್ತು 6 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎಂ ಕೆ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆ.ನ್ಯಾಯಾಲಯದಲ್ಲಿ ನನ್ನ ಉತ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಿ/ಸಿ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ
ಹೊಸದುರ್ಗ .